ದಂಗುಬಡಿಸಿಬಿಡುತ್ತಿತ್ತು. ಜವಾಹರ್‌ಲಾಲ್ ನೆಹರೂ ಅವರೇ ಆಸೆಪಟ್ಟು ನೋಡಿ ಮೆಚ್ಚಿಕೊಂಡರು ಅಂದರೆ ಅವರು ಎಂಥ ಅದ್ಭುತವಾಗಿ ನಟಿಸುತ್ತಿದ್ದರು ನೀವೇ ಊಹಿಸಿಕೊಳ್ಳಿ.

ನಂತರ ಮದ್ರಾಸ್‌ಗೆ ಹೋಗಿ ರಾಜ್‌ಕುಮಾರ್ ಅವರಿಗೆ ಆಪ್ತರಾಗಿ ಅವರ ಜೊತೆಗೆ ಸುಮಾರು ಅರವತ್ತೆಪ್ಪತ್ತು ಸಿನಿಮಾಗಳಲ್ಲಿ ನಟಿಸಿದರು. 'ಕವಿರತ್ನ ಕಾಳಿದಾಸ' ಸಿನಿಮಾದಲ್ಲಿ ನಾನು ಭೋಜರಾಜನ ಪಾತ್ರದಲ್ಲಿ ನಟಿಸಿದ್ದೆ. ಅದರ ಚಿತ್ರೀಕರಣ ನಡೆಯುತ್ತಿತ್ತು. ಮಹಾದೇವಪ್ಪ ಪ್ರತಿದಿನ ಸೆಟ್‌ಗೆ ಬರುತ್ತಿದ್ದರು. ಹಾಗೇ ಹೋಗುತ್ತಿದ್ದರು. ನಾನು, 'ಮಹಾದೇವಪ್ಪ, ನೀವು ಪಾತ್ರ ಮಾಡಲ್ವಾ?' ಎಂದು ಕೇಳಿದರೆ 'ಹೇಳಿದ್ದಾರಣ್ಣಾ' ಯಾವುದೋ ಒಂದು ಪಾತ್ರ ಇದೆ' ಅನ್ನುತ್ತಿದ್ದರು.

ಅವರದ್ದು ಆ ಸಿನಿಮಾದಲ್ಲಿ ಡಿಂಡಿಮ ಕವಿಯ ಪಾತ್ರ. ಅವರ ಪ್ರವೇಶದ ದೃಶ್ಯದಲ್ಲಿ ರಾಜ್‌ಕುಮಾರ್ ಇರಲಿಲ್ಲ. ಹಿಂದೆ ನಿಂತು ನೋಡುತ್ತಿದ್ದರು. ಅವರು ಪ್ರವೇಶ ಮಾಡಿದವರೇ ಒಂದೇ ಏಟಿಗೆ ಅಷ್ಟೂ ಡೈಲಾಗ್ ಅನ್ನು ಪಟಪಟಪಟ ಎಂದು ಹೇಳಿ ಮುಗಿಸಿಬಿಟ್ಟರು. ಅದು ಎಂಥ ಸನ್ನಿವೇಶ ಅಂದರೆ ಸೀನ್ ಮುಗಿದಿದ್ದೇ ನನ್ನನ್ನೂ ಒಳಗೊಂಡಂತೆ, ಅಲ್ಲಿನ ಪಾತ್ರಧಾರಿಗಳು, ತಂತ್ರಜ್ಞರು, ಚಿತ್ರೀಕರಣ ನೋಡುತ್ತಿದ್ದ ತಮಿಳರೂ ಎದ್ದು ನಿಂತುಕೊಂಡು ಚಪ್ಪಾಳೆ ತಟ್ಟಿದರು. ಎಲ್ಲರೂ ಹೊಗಳಿದರು. ನಾನು, 'ರೀ, ಎಲ್ಲಿ ಇಟ್ಟುಕೊಂಡಿದ್ದೀರಿ ಇಂಥ ಪ್ರತಿಭೆಯನ್ನು' ಎಂದು ಕೇಳಿದರೆ, 'ನಾನು ಎರಡು ದಿನಕ್ಕೆ ಮೊದಲೇ ಡೈಲಾಗ್ ತೆಗೆದುಕೊಂಡು ಗಟ್ಟುಮಾಡಿಬಿಟ್ಟಿದ್ದೆ' ಎಂದು ನಕ್ಕರು. ಈವತ್ತಿಗೂ ಕವಿರತ್ನ ಕಾಳಿದಾಸ ಸಿನಿಮಾದ ಡಿಂಡಿಮ ಕವಿಯ ದೃಶ್ಯ ಎಲ್ಲರ ಮನಸಲ್ಲಿಯೂ ಅಚ್ಚಳಿಯದೇ ಉಳಿದಿದೆ. ಈಗಲೂ ಆ ಪಾತ್ರವನ್ನು ನೋಡಿದರೆ ರೋಮಾಂಚನವಾಗುತ್ತದೆ. ಅಷ್ಟು ಅದ್ಭುತವಾದ ಪಾತ್ರವದು.

ನಂತರ ನಮ್ಮ ಅನೇಕ ನಾಟಕಗಳಲ್ಲಿಯೂ ಅವರು ನಟಿಸಿದ್ದರು. ನಂತರ ನಾನು ಈ ಟೀವಿಗೆ ಬಸವಣ್ಣನವರ ಜೀವನದ ಕುರಿತ 'ಅಣ್ಣ ಬಸವಣ್ಣ' ಎನ್ನುವ ಧಾರಾವಾಹಿ ಮಾಡುತ್ತಿದ್ದೆ. ಅದರಲ್ಲಿ ಅವರಿಗೆ ಒಂದು ಪಾತ್ರ ಕೊಟ್ಟಿದ್ದೆ. ಸುಮಾರು ಎರಡು ವರ್ಷ ನಾವು ಒಟ್ಟಿಗೇ ಹೈದರಾಬಾದ್‌ನಲ್ಲಿ ಕೆಲಸ ಮಾಡಿದೆವು. ಆಗ ಅವರು ಹಳೆಯ ನೆನಪುಗಳು, ರಂಗಭೂಮಿ, ಸಿನಿಮಾಗಳ ನೆನಪುಗಳನ್ನೆಲ್ಲ ಹಂಚಿಕೊಳ್ಳುತ್ತಿದ್ದೆವು.

ಅದಾದಮೇಲೂ ಆವಾಗಾವಾಗ ನಾವು ಸೇರುತ್ತಿದ್ದೆವು. ವಜ್ರಮುನಿಯವರ ಮಕ್ಕಳು ಪ್ರತಿವರ್ಷ ಕಲಾವಿದರನ್ನು ಸನ್ಮಾನಿಸಿ ಪ್ರಶಸ್ತಿ ಕೊಡುತ್ತಿದ್ದರು. ನಾನು ಶನಿಮಹಾದೇವಪ್ಪನವರಿಗೆ ಕೊಡಿ ಎಂದು ಹೇಳಿ ಕೊಡಿಸಿದ್ದೆ. ಚೆನ್ನಾಗಿ ಊಟಮಾಡುತ್ತಿದ್ದರು. ಆರೋಗ್ಯವನ್ನು ಕಾಪಾಡಿಕೊಂಡಿದ್ದರು. ಈಗ ಎರಡು ವರ್ಷಗಳ ಹಿಂದಿನವರೆಗೂ ಗಟ್ಟಿಮುಟ್ಟಾಗಿಯೇ ಇದ್ದರು. ಅದರಿಂದೀಚೆಗೆ ಆರೋಗ್ಯದಲ್ಲಿ ಬಹಳ ಏರುಪೇರಾಗಿತ್ತು. ಆವಾಗಾವಾಗ ಫೋನ್‌ನಲ್ಲಿ ಮಾತಾಡುತ್ತಿದ್ದೆವು. 'ನಮ್ಮ ಕಾಲ ಎಲ್ಲ ಮುಗೀತು. ನನ್ನನ್ಯಾರು ಈಗೆಲ್ಲ ಸಿನಿಮಾಗೆ ಕರೀತಾರೆ?' ಎಂದು ಬೇಸರದಿಂದ ಹೇಳುತ್ತಿದ್ದರು. ಅವರಿಗೆ ಕೊನೆಯವರೆಗೂ ನಟಿಸುವ ಉತ್ಸಾಹ ಇತ್ತು. ನನ್ನನ್ನು ನಟಿಸಲು ಕರೆಯುತ್ತಿಲ್ಲ ಎಂಬ ಕೊರಗೂ ಕಾಡುತ್ತಿತ್ತು. ಆದರೆ ಏನು ಮಾಡುವುದು? ಕಾಲ, ಆರೋಗ್ಯ ಎರಡೂ ನಮ್ಮ ಕೈಯಲ್ಲಿ ಇರುವುದಿಲ್ಲವಲ್ಲ. ಅವರಿಗೂ ಹಾಗೆಯೇ ಆಗಿತ್ತು. ಆದರೆ 89 ವರ್ಷಗಳ ತುಂಬ ಜೀವನ ನಡೆಸಿದ ದೊಡ್ಡ ಕಲಾವಿದ ಅವರು. ಅಷ್ಟು ಕಾಲ ನಮ್ಮೊಟ್ಟಿಗಿದ್ದರಲ್ಲ ಎಂಬುದೇ ನಮಗೆ ಹೆಮ್ಮೆಯ ವಿಷಯ.

(ನಿರೂಪಣೆ: ಪದ್ಮನಾಭ ಭಟ್)

# ಯೆಸ್! ನಾರಾಯಣ್ ಮತ್ತೆ ಸಿನಿಮಾ ಮಾಡ್ತಿದ್ದಾರೆ

ವರ್ಷಗಳ ಹಿಂದೆ ಕನ್ನಡದ ನಟ, ನಿರ್ದೇಶಕ, ಸಂಗೀತ ಸಂಯೋಜಕ ಎಸ್. ನಾರಾಯಣ್ ಅವರ ಸೂಟ್‌ಕೇಸ್ ಕಳ್ಳತನ ಆಗಿದ್ದ ಸುದ್ದಿ ಸಾಕಷ್ಟು ಸದ್ದು ಮಾಡಿತ್ತು. ಸೂಟ್‌ಕೇಸ್ ತುಂಬ ಹಣವೋ ಒಡವೆಯೋ ಇದ್ದರೆ ಅದು ಅಷ್ಟೊಂದು ಸುದ್ದಿಯಾಗುತ್ತಿರಲಿಲ್ಲವೇನೋ. ಆದರೆ ಅದರಲ್ಲಿ ನಾರಾಯಣ್ ಅವರು ಸಿದ್ದ ಮಾಡಿಟ್ಟುಕೊಂಡಿದ್ದ ಹತ್ತು ಸ್ಕ್ರಿಪ್ಟ್‌ಗಳು ಸೂರೆಯಾಗಿಹೋಗಿದ್ದವು. ಈ ಸುದ್ದಿ ಹೊರಬಿದ್ದಂತೆ ನಾರಾಯಣ್ ಅವರನ್ನೂ, ಅವರ ನಿರ್ದೇಶನದ ಸಿನಿಮಾಗಳನ್ನೂ ಬಲ್ಲ ಜನರಿಂದ ಹಲಬಗೆಯ ಪ್ರತಿಕ್ರಿಯೆಗಳು ಗುಪ್ತವಾಗಿಯೂ ಬಹಿರಂಗವಾಗಿಯೂ ವ್ಯಕ್ತವಾಗಿದ್ದವು. ಒಂದಿಷ್ಟು ಜನರು ಬೇಸರದಿಂದ ನಿಡುಸುಯ್ದರೆ, ಸಮಾಧಾನದ ನಿಟ್ಟುಸಿರು ಬಿಟ್ಟವರೂ ಇದ್ದರು. ಮತ್ತೊಂದಿಷ್ಟು ಜನರು 'ಛೇ, ಇದರಿಂದ ಬರೀ ಕನ್ನಡಕ್ಕಷ್ಟೇ ಅಲ್ಲ, ಬೇರೆ ಯಾವು ಯಾವುದೋ ಭಾಷೆಯ ಸಿನಿಮಾಗಳಿಗೂ ಅನ್ಯಾಯವಾಗಿದೆ. ಎಷ್ಟು ಸಿನಿಮಾಗಳನ್ನು ಕನ್ನಡಕ್ಕೆ ಬರುವ ಅವಕಾಶ ತಪ್ಪಿಸಿಕೊಂಡವೋ, ಪಾಪ' ಎಂದು ಕಣ್ಣುಮಿಟುಕಿಸಿ ತುಟಿಯಂಚಲ್ಲೇ ವ್ಯಂಗ್ಯದ ನಗೆ ಸೂಸಿದ್ದರು.

ಹಾಗೆಂದು ನಾರಾಯಣ್ ಸಿನಿಮಾ ಮಾಡುವುದೇನೂ ನಿಲ್ಲಿಸಲಿಲ್ಲ. 2017ರಲ್ಲಿ 'ಮನಸು ಮಲ್ಲಿಗೆ' ಎಂಬ ರೀಮೇಕ್ ಸಿನಿಮಾ ಮೂಲಕ 'ಸೈರಾಟ್' ಅನ್ನು ರಫ್ ಎಂದು ಕನ್ನಡಕ್ಕೆ ಎಸೆದಿದ್ದರು. ಪ್ರಜ್ವಲ್ ರೇವಣ್ಣ ಅವರನ್ನು ಇಟ್ಟುಕೊಂಡು 'ನಾನು ಪಂಟ ಕಣೋ' ಎಂದು ತೊಡೆತಟ್ಟಿದ್ದರು. ಆದರೆ ಆ ಸದ್ದು ಜನರ ಮನಸ್ಸಿಗೆ ಮುಟ್ಟಿರಲಿಲ್ಲವಷ್ಟೆ.

ಈಗ ಎಸ್. ನಾರಾಯಣ್ ಮತ್ತೆ ಬಂದಿದ್ದಾರೆ. ಈ ಸಲ ಖಡಕ್ ಕಥೆ, ಅಷ್ಟೇ ಖಡಕ್ ಹೀರೊವನ್ನೂ ಜೊತೆಗೆ ಸೇರಿಸಿಕೊಂಡು ಸಿನಿಯಜ್ಞಕ್ಕೆ ಸಜ್ಜಾಗಿದ್ದಾರೆ. ಆ ಖಡಕ್‌ತನದ ಸೂಚನೆಯೋ ಎಂಬಂತೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರ ಕೈಯಲ್ಲಿ ಸಿನಿಮಾದ ಟೈಟಲ್ ಬಿಡುಗಡೆ ಮಾಡಿಸಿದಿದ್ದಾರೆ. ಅಂದಹಾಗೆ ಸಿನಿಮಾದ ಹೆಸರು 'ಡಿ'. ಆದಿತ್ಯ ಮತ್ತು ಅದಿತಿ ಪ್ರಭುದೇವ ಈ ಚಿತ್ರದ ನಾಯಕ ನಾಯಕಿ.

ಸಾಮಾನ್ಯವಾಗಿ ಎಸ್. ನಾರಾಯಣ್ ನಿರ್ದೇಶನದ ಸಿನಿಮಾದ ಶೀರ್ಷಿಕೆಯ ಕೆಳಗಡೆ ಕಥೆ, ಚಿತ್ರಕಥೆ, ಸಂಭಾಷಣೆ, ಸಂಗೀತ ಸಂಯೋಜನೆ, ನಿರ್ದೇಶನ ಎಸ್. ನಾರಾಯಣ್ ಎಂಬ ಉದ್ದ ಪಟ್ಟಿ ಇರುತ್ತದೆ. ಈ ಚಿತ್ರದಲ್ಲಿ ಆ ಸಾಲು ಹಾಗೆಯೇ ಇದೆ. ಅದರಲ್ಲಿನ ಅಕ್ಷರಗಳು ಬದಲಾಗಿ ಕನ್ನಡ, ಹಿಂದಿ, ತಮಿಳು, ತೆಲುಗು, ಮಲಯಾಳಂ ಎಂಬ ಭಾಷೆಯ ಉಲ್ಲೇಖಗಳು ಸೇರಿವೆ!

ಇದೇ ಮೊದಲ ಬಾರಿಗೆ ನಾರಾಯಣ್ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವೊಂದನ್ನು ನಿರ್ದೇಶಿಸುತ್ತಿದ್ದಾರೆ. ನಿರ್ದೇಶನದಲ್ಲಿ ಅವರಿಗೆ ಸಿಕ್ಕ ಥ್ರಿಲ್ ಚಿತ್ರಮಂದಿರದಲ್ಲಿ ಪ್ರೇಕ್ಷಕರಿಗೂ ಸಿಗುವುದೇ ಎಂಬುದನ್ನು ಕಾದುನೋಡಬೇಕಷ್ಟೆ.

ಅಂದಹಾಗೆ, ಎಸ್. ನಾರಾಯಣ್ ಸೂಟ್‌ಕೇಸ್ ಕಳ್ಳತನವಾದಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟವರಿಗೊಂದು ಸುಡುಸುದ್ದಿ ಹೇಳುವುದಿದೆ. ಲಾಕ್‌ಡೌನ್ ಸಮಯದಲ್ಲಿ ನಾರಾಯಣ್ ನಾಲ್ಕು ಸ್ಕ್ರಿಪ್ಟ್ ಸಿದ್ಧಮಾಡಿ ಇಟ್ಟುಕೊಂಡಿದ್ದಾರಂತೆ! ■

